## ಜಕಾತಿಗೆ ಸಂಬಂಧಿಸಿದ ಇತರೆ ವಿಷಯಗಳು:

### ಇಂಧನ ವೆಚ್ಚದ ಹೊಂದಾಣಿಕೆ ಶುಲ್ಕಗಳು:

ಇಂಧನ ವೆಚ್ಚದ ಹೊಂದಾಣಿಕೆ ಶುಲ್ಕಗಳ ಪ್ರಸ್ತಾವನೆಯ ಬಗ್ಗೆ ಆಯೋಗವು ತನ್ನ ದಿನಾಂಕ: 30.04.2012 ರ ಜಕಾತಿ ಆದೇಶದಲ್ಲಿ ತೀರ್ಮಾನಿಸಿ, ಈ ಬಗ್ಗೆ ಅಧಿನಿಯಮಗಳನ್ನು ದಿನಾಂಕ: 22.03.2013 ರಂದು ಪ್ರಕಟಿಸಲಾಗಿದೆ. ಇಂಧನ ವೆಚ್ಚದ ಹೊಂದಾಣಿಕೆ ಶುಲ್ಕಗಳು 01.07.2013 ರ ಬಿಲ್ಲಿಂಗ್ ತ್ರೈಮಾಸಿಕ ಪ್ರಾರಂಭಿಸಿದಂತೆ ಜಾರಿಗೆ ಬಂದಿರುತ್ತದೆ. ನಂತರ 03.12.2013 ರಂದು ಸದರಿ ಅಧಿನಿಯಮಗಳಿಗೆ ಆಯೋಗವು ತಿದ್ದುಪಡಿಯನ್ನು ತಂದಿರುತ್ತದೆ. ಈ ಪ್ರಕಾರವಾಗಿ ಎಸ್ಕಾಂಗಳ ಇಂಧನ ವೆಚ್ಚದ ಹೊಂದಾಣಿಕೆ ಶುಲ್ಕಗಳ ಬೇಡಿಕೆಯನ್ನು ತ್ರೈಮಾಸಿಕವಾಗಿ ಪರಾಮರ್ಶಿಸಿ ಪ್ರತ್ಯೇಕ ಆದೇಶಗಳನ್ನು ಹೊರಡಿಸುತ್ತಿದೆ.

### ಹಸಿರು ವಿದ್ಯುಚ್ಛಕ್ತಿಯ ಜಕಾತಿ:

ಮಾನ್ಯ ಆಯೋಗವು ರಾಜ್ಯದಲ್ಲಿ ಹಸಿರು ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸಲು ಹೆಚ್.ಟಿ. ಗ್ರಾಹಕರಿಗೆ ಅವರು ಇಚ್ಛಿಸಿದಲ್ಲಿ ಅವರಿಗೆ ಅನ್ವಯವಾಗುವ ದರಕ್ಕಿಂತ ಪ್ರತಿ ಯೂನಿಟ್ಟಿಗೆ 50 ಪೈಸೆಯಷ್ಟು ಹೆಚ್ಚಿನ ಹಸಿರು ದರವನ್ನು ಮುಂದುವರೆಸಿದೆ. ವಿತರಣಾ ಸಂಸ್ಥೆಗಳು ಆರ್.ಪಿ.ಓ. ಪೂರೈಸಿ ನಂತರದ ಹಸಿರು ವಿದ್ಯುತ್ತನ್ನು ಇಚ್ಛಿತ ಹೆಚ್.ಟಿ. ಗ್ರಾಹಕರಿಗೆ ಸರಬರಾಜು ಮಾಡಬಹುದು.

### ವೀಲಿಂಗ್ ಶುಲ್ಕ:

ವಿತರಣಾ ವ್ಯವಹಾರದ ಅನುಮೋದಿತ ಎ.ಆರ್.ಆರ್. ನ ಅನುಗುಣವಾಗಿ ಪ್ರತ್ಯೇಕ ಓಲ್ಟೇಜ್ ವರ್ಗಕ್ಕೆ ಈ ಕೆಳಕಂಡಂತೆ ವೀಲಿಂಗ್ ಶುಲ್ಕಗಳನ್ನು ಅನ್ವಯಿಸಲಾಗಿದೆ.

| | |
|---|---|
| ವಿದ್ಯುತ್ ವಿತರಣೆಗಾಗಿ ಅನುಮೋದಿಸಿರುವ ವಾರ್ಷಿಕ ಕಂದಾಯದ ಅವಶ್ಯಕತೆ (ಕೋಟಿ ರೂ.ಗಳಲ್ಲಿ) | 2346.34 |
| ಅನುಮೋದಿಸಿರುವ ವಿದ್ಯುತ್ ಮಾರಾಟ(ಎಂ.ಯು.ಗಳಲ್ಲಿ) | 29950.51 |
| ವೀಲಿಂಗ್ ಶುಲ್ಕ– (ಪ್ರತಿ ಯೂನಿಟ್ ಗೆ ಪೈಸೆಗಳಲ್ಲಿ) | 78.34 |
| **ಯೂನಿಟ್/ಪೈಸೆಗಳಲ್ಲಿ** | |
| ಹೆಚ್.ಟಿ.–ವಿತರಣಾ ಜಾಲ | 23.50 |
| ಎಲ್.ಟಿ.– ವಿತರಣಾ ಜಾಲ | 54.84 |

ಮೇಲಿನ ದರಗಳ ಜೊತೆಯಲ್ಲಿ ತಾಂತ್ರಿಕ ವಿತರಣಾ ನಷ್ಟವನ್ನು ಎಲ್ಲಾ ಓಪನ್ ಆಕ್ಸೆಸ್/ವೀಲಿಂಗ್ ವ್ಯವಹಾರಗಳಿಗೆ ಅನ್ವಯಿಸಲಾಗುವುದು.

| ತಾಂತ್ರಿಕ ವಿತರಣಾ ನಷ್ಟ | % ನಷ್ಟ |
|---|---|
| ಹೆಚ್.ಟಿ | 3.42 |
| ಎಲ್.ಟಿ | 7.26 |



**ಟಿಪ್ಪಣಿ : ತಾಂತ್ರಿಕ ವಿತರಣಾ ಒಟ್ಟು ನಷ್ಟವು ಹೆಚ್.ಟಿ, ಎಲ್.ಟಿ ಮತ್ತು ವಾಣಿಜ್ಯ ನಷ್ಟ ಎಂದು ಹಂಚಿಕೆಯಾಗಿದ್ದು, ಬೆವಿಕಂ ಒದಗಿಸಿದ Energy Flow Diagram ನ ಮೇಲೆ ಅವಲಂಬಿತವಾಗಿದೆ.**

ಪಾವತಿಸಬೇಕಾದ ವೀಲಿಂಗ್ ಶುಲ್ಕ ಪೈಸೆಗಳನ್ನು ಪೂರ್ಣಾಂಕಕ್ಕೆ ಪರಿವರ್ತಿಸಿದ ನಂತರ ವಿದ್ಯುತ್ ಇಂಜೆಕ್ಟ್ ಮಾಡಿದ ಮತ್ತು ವಿದ್ಯುತ್ ಡ್ರಾ ಮಾಡಿದ ವಿದ್ಯುತ್ ಜಾಲಕ್ಕೆ ಅನುಗುಣವಾಗಿ ಪಾವತಿಸಬೇಕಾದ ದರ ಕೆಳಕಂಡಂತೆ ಇದೆ.

**ಪೈಸೆ / ಯೂನಿಟ್**

| ವಿದ್ಯುತ್ ಇಂಜೆಕ್ಟ್ ಮಾಡಿದ ಪಾಯಿಂಟ್ → / ವಿದ್ಯುತ್ ಡ್ರಾ ಮಾಡಿದ ಪಾಯಿಂಟ್ ↓ | ಹೆಚ್.ಟಿ | ಎಲ್.ಟಿ |
|---|---|---|
| ಹೆಚ್.ಟಿ | 23(3.42%) | 78(10.68%) |
| ಎಲ್.ಟಿ | 78(10.68%) | 55(7.26%) |

**ಟಿಪ್ಪಣಿ** : ಆವರಣದಲ್ಲಿರುವ ದರಗಳು ಅನ್ವಯಿತ ನಷ್ಟವನ್ನು ಸೂಚಿಸುತ್ತದೆ.

ಬೆವಿಕಂ ಜಾಲದಲ್ಲಿ ನವೀಕರಿಸಬಹುದಾದ ಮೂಲಗಳಿಂದ ರಾಜ್ಯದ ಗ್ರಾಹಕರಿಗೆ ರವಾನೆಯಾಗುವ ಅಥವ ವೀಲಿಂಗ್ ಶಕ್ತಿಯನ್ನು ಹೊರತುಪಡಿಸಿ ಓಪನ್ ಆಕ್ಸೆಸ್ ಅಥವಾ ವೀಲಿಂಗ್ ಮಾಡುವಂತಹವರಿಗೆ ಮಾತ್ರ, ಮೇಲೆ ನಿರ್ಧರಿಸಿದಂತೆ ವೀಲಿಂಗ್ ದರಗಳು ಅನ್ವಯಿಸುತ್ತದೆ.

### ರಾಜ್ಯದಲ್ಲಿನ ನವೀಕರಿಸಲ್ಪಡುವ ಮೂಲಗಳ ವೀಲಿಂಗ್ ವಿದ್ಯುತ್ ಶಕ್ತಿ ಶುಲ್ಕಗಳು:

ವೀಲಿಂಗ್ ಮತ್ತು ಬ್ಯಾಂಕಿಂಗ್ ಶುಲ್ಕಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ನವೀಕರಿಸಲ್ಪಡುವ ಮೂಲಗಳ ವೀಲಿಂಗ್ ಶಕ್ತಿ ಗ್ರಾಹಕರುಗಳಿಗೆ ಆಯೋಗವು ಕಾಲಕಾಲಕ್ಕೆ ಪ್ರತ್ಯೇಕವಾಗಿ ಹೊರಡಿಸುವ ಆದೇಶಗಳು ಅನ್ವಯಿಸುತ್ತವೆ.

### ನವೀಕರಿಸಲ್ಪಡುವ ಮೂಲಗಳ ವೀಲಿಂಗ್ ವಿದ್ಯುತ್ ಶಕ್ತಿ ಶುಲ್ಕ, ನವೀಕರಿಸಲಾಗುವ ವಿದ್ಯುತ್ ಶಕ್ತಿ ಪ್ರಮಾಣ ಪತ್ರವನ್ನು (REC) ಹೊಂದಿರುವ ರಾಜ್ಯದ/ಹೊರ ರಾಜ್ಯದ ಗ್ರಾಹಕ/ಇತರರಿಂದ ಪಡೆಯುವ ವೀಲಿಂಗ್ ಶಕ್ತಿ:

ನವೀಕರಣಗೊಳ್ಳುವ ಶಕ್ತಿಯು ರಾಜ್ಯದ/ಹೊರ ರಾಜ್ಯದ ಗ್ರಾಹಕರಿಂದ ಪಡೆದ ವೀಲಿಂಗ್ ಶಕ್ತಿಯಾಗಿದ್ದಲ್ಲಿ, ತೆರಿಗೆ ಆದೇಶದಲ್ಲಿ ತಿಳಿಸಿರುವ ಸಾಮಾನ್ಯ ವೀಲಿಂಗ್ ಶುಲ್ಕಗಳು ಅನ್ವಯಿಸುತ್ತದೆ. REC's ಆಯ್ಕೆ ಮಾಡುವ ಸ್ವಯಂ ಚಾಲಿತ ನವೀಕರಣಗೊಳ್ಳಬಹುದಾದ ಶಕ್ತಿ ಉತ್ಪಾದಕರಿಗೆ ಸೌರಶಕ್ತಿ ಯೋಜನೆಗಳು ಸೇರಿದಂತೆ, ವೀಲಿಂಗ್ ಶುಲ್ಕವು ಕಾಲಕಾಲಕ್ಕೆ ಆಯೋಗವು ನಿಗದಿ ಪಡಿಸಿರುವ ಆದೇಶ ಅನ್ವಯವಾಗುತ್ತದೆ.

### ಅಂತರ್ ಸಹಾಯಧನ ಮೇಲುಕರ:

ಆಯೋಗವು ಈ ಆದೇಶದ ಮೂಲಕ ನಿರ್ಧರಿಸಿದಂತೆ ಬೆವಿಕಂ ವ್ಯಾಪ್ತಿಯಲ್ಲಿ ಮಾಡುವಂತಹ ಎಲ್ಲಾ ಓಪನ್ ಆಕ್ಸೆಸ್/ವೀಲಿಂಗ್ ವ್ಯವಹಾರಗಳಿಗೆ, ಶುಲ್ಕ ಮತ್ತು ಅಂತರ್ ಸಹಾಯಧನ ಮೇಲುಕರವು ಅನ್ವಯವಾಗುತ್ತದೆ.

ಪೈಸೆ / ಯೂನಿಟ್

| ವೋಲ್ಟೇಜ್ ವಾರು | 66 ಕೆ.ವಿ. ಮತ್ತು ಹೆಚ್ಚಿನ ಹಂತದಲ್ಲಿ | ಹೆಚ್.ಟಿ. 11/ 33 ಕೆ.ವಿ ಹಂತದಲ್ಲಿ |
|---|---|---|
| ಹೆಚ್.ಟಿ.–1 ನೀರು ಸರಬರಾಜು | 86 | 38 |
| ಹೆಚ್.ಟಿ.–2ಎ(i) ಕೈಗಾರಿಕೆಗಳು | 207 | 207 |
| ಹೆಚ್.ಟಿ.–2ಎ(ii) ಕೈಗಾರಿಕೆಗಳು | 179 | 179 |
| ಹೆಚ್.ಟಿ.–2ಬಿ(i) ವಾಣಿಜ್ಯ ಸಂಕೀರ್ಣಗಳು | 260 | 260 |
| ಹೆಚ್.ಟಿ.–2ಬಿ(ii) ವಾಣಿಜ್ಯ ಸಂಕೀರ್ಣಗಳು | 215 | 215 |
| ಹೆಚ್.ಟಿ.–2ಸಿ(i) | 176 | 176 |
| ಹೆಚ್.ಟಿ.–2ಸಿ(ii) | 198 | 198 |
| ಹೆಚ್.ಟಿ.–3ಎ(i) ಏತ ನೀರಾವರಿ | 0 | 0 |
| ಹೆಚ್.ಟಿ.–3ಎ(ii) ಏತ ನೀರಾವರಿ | 0 | 0 |
| ಹೆಚ್.ಟಿ.–3ಎ(iii) ಏತ ನೀರಾವರಿ | 0 | 0 |
| ಹೆಚ್.ಟಿ.–3ಬಿ ಕೃಷಿ ಮತ್ತು ನೀರಾವರಿ | 0 | 0 |
| ಹೆಚ್.ಟಿ.–4 ಬಹು ಮಹಡಿ ಕಟ್ಟಡಗಳು | 161 | 161 |
| ಹೆಚ್.ಟಿ.–5 ತಾತ್ಕಾಲಿಕ | 301 | 301 |

**ಗ್ರಾಹಕರಿಗೆ ಹೆಚ್ಚುವರಿ ಸರ್‌ಚಾರ್ಜ್:**

(ಎ) ವಿದ್ಯುತ್ ವಿನಿಮಯಗಳನ್ನೊಳಗೊಂಡ ಮೂಲಗಳಿಂದ ಆಯಾ ಮಾಹೆಯಲ್ಲಿ ಪಡೆದುಕೊಳ್ಳುವ ವಾಸ್ತವಿಕ ವಿದ್ಯುತ್ ಆಧಾರದ ಮೇಲೆ ವಿದ್ಯುತ್ ಖರೀದಿಸುವ ಹೆಚ್.ಟಿ/ ಇಹೆಚ್‌ಟಿ ಓಪನ್ ಆಕ್ಸೆಸ್ ಗ್ರಾಹಕರು ಮಾಹೆಯಾನ ಪ್ರತಿ ಯೂನಿಟ್ಟಿಗೆ 80 ಪೈಸೆ ಹೆಚ್ಚುವರಿ ಸರ್‌ಚಾರ್ಜ್ ಪಾವತಿ ಮಾಡಬೇಕಾಗಿರುತ್ತದೆ.

(ಬಿ) ನವೀಕರಿಸಬಹುದಾದ ಶಕ್ತಿ ಉತ್ಪಾದಕರಿಂದ ವಿದ್ಯುತ್ ಖರೀದಿಸಲ್ಪಡುವ ಓಪನ್ ಆಕ್ಸೆಸ್ ಗ್ರಾಹಕರು ಮಾಹೆಯಾನ ಪ್ರತಿ ಯೂನಿಟ್ಟಿಗೆ 20 ಪೈಸೆ ಹೆಚ್ಚುವರಿ ಸರ್‌ಚಾರ್ಜ್ ಪಾವತಿ ಮಾಡಬೇಕಾಗಿರುತ್ತದೆ.

(ಸಿ) Captive ಗ್ರಾಹಕರಾಗಿದ್ದಲ್ಲಿ, Captive ಬಳಕೆಗೆ ಹೆಚ್ಚುವರಿ ಸರ್‌ಚಾರ್ಜ್ ವಿಧಿಸಲಾಗುವುದಿಲ್ಲ.

(ಡಿ) ಮೇಲ್ಕಂಡ (ಎ) ಮತ್ತು (ಬಿ) ಯಲ್ಲಿ ತಿಳಿಸಲಾಗಿರುವ ಹೆಚ್ಚುವರಿ ಸರ್‌ಚಾರ್ಜ್ ಆರ್ಥಿಕ ವರ್ಷ–21 ರ ಅವಧಿಯಲ್ಲಿ ಓಪನ್ ಆಕ್ಸೆಸ್ ಗ್ರಾಹಕರಿಗೆ ಅನ್ವಯಿಸುತ್ತದೆ.

**ವಿದ್ಯುತ್ ತೆರಿಗೆ**

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: 24 ದಿನಾಂಕ 19–07–2018 ರನ್ವಯ ನೀರಾವರಿ ಪಂಪುಸೆಟ್ಟುಗಳು (10 ಹೆಚ್.ಪಿ ಸೇರಿದಂತೆ, 10 ಹೆಚ್.ಪಿ. ವರೆಗಿನ ನೀರಾವರಿ ಪಂಪುಸೆಟ್ಟುಗಳು) ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾಪನಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಗ್ರಾಹಕರಿಗೆ ವಿದ್ಯುಚ್ಛಕ್ತಿ ಬಳಕೆಯ ಬಿಲ್ಲಿನ ಮೊತ್ತದ ಮೇಲೆ (ಬಾಕಿಯನ್ನು ಹೊರತುಪಡಿಸಿ) ಶೇ.9 ರಷ್ಟು ವಿದ್ಯುತ್ ತೆರಿಗೆಯು ದಿನಾಂಕ 19–07–2018 ರಿಂದ ಜಾರಿಯಲ್ಲಿರುತ್ತದೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: EN 106 EBS 2018 ದಿನಾಂಕ 19–07–2018 ರನ್ವಯ, ಒಟ್ಟು 500 ಕೆವಿಎ ಗಿಂತ ಮೇಲ್ಪಟ್ಟು ಸ್ಥಾಪಿತ ಸಾಮರ್ಥ್ಯ ಹೊಂದಿರುವ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನಾ ಘಟಕಗಳ ವಿದ್ಯುತ್ ಬಳಕೆಯ ಮೇಲೆ 20 ಪೈಸೆ ತೆರಿಗೆ ವಿಧಿಸಿ, ಸಂಗ್ರಹಿಸುವಂತೆ ಸೂಚಿಸಲಾಗಿದೆ.

**ಸದರಿ ತೆರಿಗೆಯು ದಿನಾಂಕ 19–07–2018 ರಿಂದ ಜಾರಿಯಲ್ಲಿರುತ್ತದೆ.**